ವರ್ಷದಿಂದ ಕೇಳುತ್ತಾ ಬಂದಿರುವ ಮಾತು. ಅಡಿಗೆ ಮಾಡಿ, ಅಥವಾ ಮಾಡಿಸಿ ಮನೆ ಅಚ್ಚುಕಟ್ಟಾಗಿ ಇಟ್ಟುಕೊಂಡು ದನಿಯೇರಿಸದೆ, ಮಕ್ಕಳ ನಗುವಷ್ಟೇ ಅವರಿಗೆ ಕೇಳುಸುವ ಹಾಗೆ ಮ್ಯಾನೇಜ್ ಮಾಡುತ್ತಾ ಅವರಮ್ಮ, ಅಜ್ಜಿಗೆ ಅನುಸರಿಸಿಕೊಂಡು ಸಂಸಾರ ನಡೆಸುತ್ತಿರುವ ನನಗೆ ಇಂತಹ ಮೂದಲಿಸುವ ಮಾತು ಹೊಸತಲ್ಲ. ಮನಸ್ಸು ಕುಗ್ಗಿದ್ದರೂ ಅವಮಾನದಿಂದ ಕಣ್ಣೀರು ಉಕ್ಕಿ ಹರಿದರೂ ಗಮನಿಸುವವರು ಯಾರೂ ಇಲ್ಲ. ಈ ಮಾತುಗಳನ್ನು ಕೇಳಬಾರದು ಅಂದರೆ ಮೌನವಾಗಿರಬೇಕು....ಆದರೆ ಕೆಲವೊಮ್ಮೆ ನಾಲಿಗೆ ಅನುಭವದ ಮಾತು ಕೇಳುವುದಿಲ್ಲ.

‘ನನ್ನ ಸಹಾಯ ಬೇಕು ಎಂದು ನೀವು ಕೇಳುವ ಕಾಲಕ್ಕೆ ನಾನು ಇಲ್ಲದೆ ಹೋದರೆ?’ ಮೆಲ್ಲನೆ ಪ್ರಶ್ನಿಸಿದೆ.

‘ಇಲ್ಲದೆ ಎಲ್ಲಿಗೆ ಹೋಗ್ತ್ಯಾ?’ ಅಚ್ಚರಿಯಿಂದ ಹುಬ್ಬೇರಿಸಿ ತಲೆ ಹಿಂದಕ್ಕೆ ಹಾಕಿ ಜೋರಾಗಿ ನಕ್ಕರು.

ಮುಂದಿನ ಮಾತಿಗೆ ಅವಕಾಶವಿಲ್ಲವೆನ್ನುವಂತೆ ಜೇಬಿನಿಂದ ಮೊಬೈಲ್ ಫೋನ್ ಕೈಗೆತ್ತಿಕೊಂಡು ನಂಬರ್ ಒತ್ತುತ್ತಾ ಆಚೆ ಹೋದರು.

ಸೋಫಾದಲ್ಲಿ ಹಿಂದಕ್ಕೆ ಒರಗಿ ಕುಳಿತುಕೊಂಡೆ.

ಹೌದು... ಇಲ್ಲಿ ಇರದೆ ಎಲ್ಲಿಗೆ ಹೋಗಬಲ್ಲೆ? ಇದು ನನ್ನ ಮನೆ... ಇಲ್ಲಿರದೆ ಎಲ್ಲಿಗೆ ಹೋಗುವುದು? ದುಡ್ಡು ಅವರದಿರಬಹುದು, ಆದರೆ ಸಜಾವಟ್ಟು ಎಲ್ಲಾ ನಂದೇ ಅಲ್ಲವೇ. ಇದೇ ನನ್ನ ಮನೆ ಅಂದರೆ ನಾನು ಇಲ್ಲೇ ಬೇರು ಬಿಡಬೇಕು, ಬೆಳೆಯಬೇಕು.. ಆದರೆ ಬೇರು ಬಿಡಲೇ ಆಗುತ್ತಿಲ್ಲ. ಕೆಳಗಿನ ನೆಲ ಗಟ್ಟಿ ಭೇದಿಸಲೇ ಆಗುತ್ತಿಲ್ಲ. ಎತ್ತರಕ್ಕೆ ಬೆಳೆಯೋಣ ಅಂದರೆ ಮೇಲಿರುವ ಛಾವಣಿಯೂ ಗಟ್ಟಿ. ಅದನ್ನು ಮೀರಲೇ ಆಗುವುದಿಲ್ಲ. ಹೊರಗಿನ ಬಯಲಿಗೆ ಬರಬೇಕು. ಆದರೆ ರಕ್ಷಣೆಯಿಲ್ಲದ ಭೀತಿ, ಆದರೆ ಈ ಮನೆ ಒಂದು ರಕ್ಷಣೆಯೇ ಅಥವಾ ಬಂಧೀಖಾನೆಯೇ? ನೋಡುವವರಿಗೆಲ್ಲಾ ಈ ಮನೆಯ ಒಡತಿ, ಆಳುಗಳಿಗೆಲ್ಲಾ ಯಜಮಾನ್ತಿ. ಆದರೆ ಇಲ್ಲಿ ಇರಬೇಕು ಎಂದು ಇರುವುದಕ್ಕೂ ಬೇರೆ ಎಲ್ಲೂ ಹೋಗುವುದಕ್ಕೆ ಇಲ್ಲ ಎಂದು ಇರುವುದಕ್ಕೂ ವ್ಯತ್ಯಾಸವಿಲ್ಲವೇ?

* * *

ದಿನದಿನಕ್ಕೆ ಉಸಿರು ಕಟ್ಟಿಸುತ್ತಿದೆ ಮನೆಯ ವಾತಾವರಣ ಹೊಂದಿ ಕೊಂಡಷ್ಟೂ. ಒಪ್ಪಿಕೊಂಡಷ್ಟೂ ಹೆಚ್ಚಾಗುತ್ತಿದೆ ಇವರ ಆಕ್ರಮಣ. ಹೊಂದಿಕೊಂಡು ಬಾಳುವುದು ಒಂದು ಸದ್ಗುಣ ಅಲ್ಲ ಈಗಿನ ಕಾಲಕ್ಕೆ ಎಂದು ವತ್ಸಲಾ ಹೇಳುವುದು ಸತ್ಯ. ಜಾಗ ಬಿಟ್ಟಷ್ಟೂ ಒತ್ತರಿಸಿ ಮೂಲೆಗೆ ಸೇರಿಸಿ, ಉಸಿರು ಕಟ್ಟಿಸಿ...

ಹೋಗಿದ್ದೆನಲ್ಲ... ಎಲ್ಲಾ ಕೊಡವಿಕೊಂಡು ಮಕ್ಕಳನ್ನು ಕರೆದುಕೊಂಡು ಅಮ್ಮನ ಮನೆಗೆ, ಏಳು ವರ್ಷದ ರಾಹುಲ್, ಐದು ವರ್ಷದ ರಾಧಿಕಾಳನ್ನು ಕಟ್ಟಿಕೊಂಡು ... ಅಬ್ಬ ಇಲ್ಲಿಗಿಂತ ಕಠಿಣ ಅಲ್ಲಿಯ ವಾಸ. ಹುಟ್ಟಿ ಬೆಳೆದ ಮನೆಯಲ್ಲಿ ಪರಕೀಯ ಭಾವನೆ ಮೂಡಿಸುವ ಅಪ್ಪ ಅಮ್ಮ ಈ ಗಂಡನಿಗಿಂಥ ಕ್ರೂರಿಗಳು. ಇದಾದರೆ ಅವರು ಹುಟ್ಟಿ, ಬೆಳೆದ ಮನೆ ನಾನು ಈ ಮನೆಗೆ ಬಂದು ಹದಿನಾಲ್ಕು ವರ್ಷವಾದರೆ, ಅವರು ಈ ಮನೆಯಲ್ಲಿ ಹುಟ್ಟಿದಂದಿನಿಂದ. ಅಂದರೆ ನಲವತ್ತೆರಡು ವರ್ಷದಿಂದ ಇದ್ದಾರೆ. ಈ ಮನೆ ಕಟ್ಟಿಸಿರುವುದು ಅವರ ತಾತ. ಈ ಮನೆಯ ಪ್ರತಿಯೊಂದು ಮೂಲೆಯೂ ಇವರಿಗೆ ಚಿರಪರಿಚಿತ. ಈ ಮನೆಯಲ್ಲಿ ನಮ್ಮೊಂದಿಗೆ ಇರುವವರು ಇವರ ತಾಯಿ, ತಂದೆ, ಅಜ್ಜಿ, ನಾನಾದರೋ ಎಲ್ಲರನ್ನೂ ಬಿಟ್ಟು ಮಡಿಲಕ್ಕಿ ಕಟ್ಟಿಕೊಂಡು ಈ ಮನೆ ಹೊಸ್ತಿಲಲ್ಲಿ ಪಡಿಯಕ್ಕಿ ಒದ್ದು ಒಳಗೆ ಬಂದವಳು

## ಗಾದೆ

ಮಾಡಿದ್ದುಣ್ಣೋ ಮಾರಾಯ
ಅನ್ನೋದೇನೋ ಗಾದೆ
ಮಾಡ್ದೇ ಇರಾದು ಉಂಡೇ
ಮನ್ಸಾ ಮಾಡ್ಕಂಡಿದ್ದು ತಗಾದೆ!

– ಸಂತೆಬೆನ್ನೂರು ಫೈಜ್ನಾಟ್ರಾಜ್



ಈಶ್ವರ

ಅಷ್ಟೇ. ಆದರೆ ಹೊರಗೆ ಹೋಗುವುದು ಕಷ್ಟವೇ. ಹೇಗೋ ಹೊಂದಿಕೊಂಡು, ಬಾಯ್ಮುಚ್ಚಿಕೊಂಡು ಬಾಳುವೆ ಮಾಡಬೇಕು. ಕಷ್ಟ, ಬೇಸರ ಅಂದರೆ ಕೇಳುವವರು ಯಾರು? ಇಷ್ಟು ದೊಡ್ಡ ಮನೆಯಲ್ಲಿ ಕಷ್ಟವೇ? ಆಳು ಕಾಳುಗಳಿಂದ ತುಂಬಿರುವ ಮನೆ, ಹಸುವಿನಂಥ ಅತ್ತೆ, ಮೂಕ ಪ್ರಾಣಿಯಂತಹ ಮಾವ, ಮೊಮ್ಮಗನ ಹೆಂಡತಿ, ವಂಶ ಉಳಿಸಲು. ಬೆಳೆಸಲು ಬಂದವಳು ಎಂದು ತುಂಬು ಪ್ರೀತಿ ತೋರುವ ಅಜ್ಜಿ. ಒಬ್ಬಳು ಹೆಣ್ಣಿಗೆ ಇನ್ನೆಂತಹ ಮನೆ ಬೇಕು? ಜೊತೆಗೆ ಸರಿಸಮಾನರು ಎಂದು ಕಾದಾಡಲು ವಾರಗಿತ್ತಿಯರಿಲ್ಲ, ಬಂದು ಹೋಗಿ, ಚುಚ್ಚಿಕೊಟ್ಟು ತಾಪತ್ರಯ ತಂದಿಡಲು ನಾದಿನಿಯರಿಲ್ಲ. ನಾಳೆ ಬರಬಹುದು ವಾರಗಿತ್ತಿಯರು ಎನ್ನಲು ಮೈದುನರರಿಲ್ಲ ಅಬ್ಬ! ಹಿಡಿ ತುಂಬಾ ಮಲ್ಲಿಗೆ ಹೂವು. ಪೂಜೆ ಮಾಡಿರಬೇಕು ಗೌರಿಗೆ... ಅದಕ್ಕೆ ಈ ಮನೆಯ ಸೊಸೆ ಆಗುವ ಸೌಭಾಗ್ಯ ದಕ್ಕಿರುವುದು ಎಂಬುದು ಹೆಚ್ಚು ಕಡಿಮೆ ಎಲ್ಲಾ ಹಿರಿಯರ ಅಭಿಪ್ರಾಯ.

ಕಾಲೇಜಿನಲ್ಲಿ ಕೊನೆಯ ವರ್ಷ ಬಿ.ಕಾಂ ಓದುತ್ತಿದ್ದೆ. ನಮ್ಮ ಮನೆಯಿಂದ ನಾಲ್ಕು ಕಿಲೋ ಮೀಟರಿನ ಹಾದಿ ಕಾಲೇಜು, ಹಠ ಹಿಡಿದು, ರಾತ್ರಿ ಮನೆಯ ಮುಸುರೆ ಪಾತ್ರೆ, ಎಲ್ಲರ ಊಟದ ತಟ್ಟೆ ತೊಳೆಯುವ ವಾದ ಮಾಡಿ ಸ್ಕೂಟಿ ತೆಗೆಸಿಕೊಂಡಿದ್ದೆ. ಪುಟ್ಟ ಹಳದಿ ಹೆಲ್ಮೆಟ್ ಧರಿಸಿ, ಚೂಡಿದಾರಿನ ದುಪ್ಪಟ್ಟಾವನ್ನು ಜನಿವಾರದಂತೆ ಭುಜದ ಸುತ್ತ ಹೊದ್ದು ಸೊಂಟದ ಬಳಿ ಗಂಟು ಕಟ್ಟಿಕೊಂಡು ಸ್ಕೂಟಿ ಓಡಿಸುತ್ತಿದ್ದೆ.

‘ಇದೇನು ಗಂಡು ಹುಡುಗನ ಹಾಗೆ ಬೆಳೆಸುತ್ತಿದ್ದೀರಿ’ ಎಂದು ಅಮ್ಮ ಅಪ್ಪನ ಜೊತೆ ಜಗಳವಾಡುತ್ತಿದ್ದಳು. ಲಕ್ಷಣವಾಗಿ ಸೀರೆ ಉಟ್ಟುಕೊಂಡು ಭಾರ್ಗವಿ... ಕೊನೆ ಮನೆ ನಾರಾಯಣನ ಮಗಳು ಭಾರ್ಗವಿ ಬಸ್ಸಿನಲ್ಲಿ ಕಾಲೇಜಿಗೆ ಹೋಗಿ ಬರಲ್ವಾ.. ನಿಮ್ಮ ಮಗಳದೇ ಪ್ರತಿಷ್ಠೆ ಎಂದು ಅಪ್ಪನನ್ನು ಜರಿಯುವಳು.

‘ಡಿಸ್ಟ್ರಿಕ್ಟ್ ಕಮಿಷನರ್ ಮಗಳು ಜೀನ್ಸ್ ಪ್ಯಾಂಟ್ ಹಾಕಿಕೊಂಡು ಬರ್ತಾಳೆ ಕಾಲೇಜಿಗೆ! ನಂಗೂ ಹಾಕೊಳೋಕ್ಕೆ ಇಷ್ಟ ಕೊಡಿಸು ಅಂತ ಹಠ ಮಾಡಿದ್ರೆ ಏನು ಮಾಡ್ತ್ಯಾ? ಇನ್ನೊಬ್ಬರಿಗೆ ಹೋಲಿಸಿ ಮಾತಾಡಬೇಡ’ ಎಂದು ಅಮ್ಮನೊಂದಿಗೆ ಜಗಳವಾಡಿದ್ದೆ.

‘ನಾನಿದಿದ್ದೇ ಹಾಗೆ... ಎಲ್ಲಾದಿಕ್ಕೂ ನೇರ ಮಾತು. ಪ್ರಶ್ನೆ, ವಾದ, ವಾಗ್ಯುದ್ಧ. ಅದೇ ನನಗಿಂಥ ಎರಡು ವರ್ಷ ಚಿಕ್ಕವನಾದ ನಾಗೇಂದ್ರ, ಸೌಮ್ಯ ಮುಖದ, ನಲ್ಮೆಯ ಮಾತಿನ ನಿಧಾನಸ್ತ, ಮಾತೇ ಕಡಿಮೆ. ಯಾರು ಏನು ಹೇಳಿದರೆ ಹಾಗೆ... ಅದೂ ಅಮ್ಮ ಹೇಳಿಬಿಟ್ಟರೊಂತೂ ಅದೇ ವೇದವಾಕ್ಯ’.

ಇವ್ನು ಗಂಡು ಮಗ, ಅವ್ಳು ಹೆಣ್ಣು ಮಗಳಾಗಬೇಕಿತ್ತು. ಅದೇಕೋ ನಮ್ಮನೇಲಿ ಎಲ್ಲಾ ಅದಲು ಬದಲು... ಅಮ್ಮ ನನ್ನ ಬೈದು ನಾಗೇಂದ್ರನ್ನ ಹೊಗಳಿ ಆಡಿದ ಮಾತುಗಳು ಇವಾಗಿದ್ದರೂ ಮಗ ಜೋರಿಲ್ಲವಲ್ಲ ಎಂಬ ವಿಷಾದವೂ ಇತ್ತು.

ನೀನು ಅವನ ಮೇಲೆ ಜೋರು ಮಾಡಬೇಡ, ಪಾಪ ತಬ್ಬಿಬ್ಬಾಗಿ ನಿಲ್ತಾನೆ...

ನನ್ನ ನಾಗೇಂದ್ರನ ಸಣ್ಣ ಪುಟ್ಟ ಜಗಳ ಕೂಡ ಅಮ್ಮ ಅವನ ಪರ ವಹಿಸಿ ನನ್ನ ಬಾಯಿ ಮುಚ್ಚಿಸುವುದರಲ್ಲಿ ಮುಗಿಯುತ್ತಿತ್ತು.

‘ಅಮ್ಮ ಕಲ್ತುಕೊಳ್ತಾನೆ ಅವನ ಪರವಾಗೇ ಯಾವಾಗ್ಲೂ ಬರ್ತಿಯಲ್ಲ...’ ಅವ್ನು ಏನು ಮಾಡಿದ ಗೊತ್ತಾ... ಎಂಬ ನನ್ನ ಅಹವಾಲು ಅಮ್ಮನ ಬಳಿ ನಡೆಯುತ್ತಿರಲಿಲ್ಲ.

‘ಏನೇ ಮಾಡಿರಲಿ... ನಿನ್ನ ಮಾತು, ಏರಿಸಿದ ದನಿ ಕೇಳೊಕ್ಕೆ ಆಗೋಲ್ಲ... ಹೆಣ್ಣು ಮಕ್ಕಳಿಗೆ ಇಷ್ಟು ದೊಡ್ಡ ಗಂಟಲು ಇರಬಾರದು, ಅವ್ನು ಗಂಡು ಹುಡುಗ, ಅವನಿಗಿರುವ ನಿಧಾನ ನಿನಗಿಲ್ಲವಲ್ಲ...’

‘ಅದೇನು? ಮಗನ್ನ ಅಷ್ಟು ವಹಿಸಿಕೊಂಡು ಬರ್ತ್ಯಾ? ನಾನು ನಿನ್ನ ಮಗಳೇ ತಾನೇ... ನಿನ್ನ ದನಿ ಏನೂ ಕಮ್ಮಿ ವಾಲ್ಯೂಂ ಇದ್ಯ? ಇಲ್ಲ ನಂಗೆ ದೊಡ್ಡ ಗಂಟಲು ಅಂತ ಹಂಗಿಸ್ತ್ಯಲ್ಲ..’ ನಾನು ಸೋಲುವವಳಾಗಿರಲಿಲ್ಲ.

‘ಕೇಳಿಸ್ಕೊಂಡ್ರಾ ನಿಮ್ಮ ಮಗಳ ಮಾತು? ಏನೂ? ನಾಳೆ ಸೇರಿದ ಮನೇಲಿ ನಂಗೆ ಅರ್ಚನೆ ಮಾಡಿಸದೆ ಬಿಡೋಳಲ್ಲ ಇವ್ಳು! ಅದೆಂಥ ತಾಯಿ! ಮಗ್ಳನ್ನ ಹೀಗೆ ಬೆಳೆಸಿದಾಳಲ್ಲ, ಲಂಗು ಲಗಾಮಿಲ್ಲದೆ ಅಂತ ನನ್ನ ಅನ್ನದೇ ಇರ್ತಾರಾ?’

ಹೊರಗೆ ಜಗಲಿಯ ಮೇಲೆ ಪೇಪರ್ ಓದುತ್ತಲೋ, ರಾಮಾಯಣ ಓದುತ್ತಲೋ ಇರುತ್ತಿದ್ದ ಅಪ್ಪನನ್ನು ಕೂಗುತ್ತಿದ್ದಳು ಅಮ್ಮ ನ್ಯಾಯಕ್ಕೆ.

‘ಲಂಗು ಲಗಾಮು ಇರಲು ನಾನೇನು ಕುದುರೆಯೇ? ನೀನು ಏನೇನೂ ಹೇಳಬೇಡ ನಾನು ಮದುವೆಯೇ ಮಾಡಿಕೊಳ್ಳಲ್ಲ...’